Sri F. H. MOHSIN.—I will make my suggestion afterwards. I am now explaining the present criteria. If the landlords were to get rents prevailing in 1940 in Bombay Area, or Hyderabad area or Madras area, it would not be an encouragement for the landlords to repair the buildings or to construct new buildings. I know that so many houses are being left to themselves; they were not cared for and they were not even repaired. They were allowed to fall down and get destroyed, because the landlords do not get any benefit out of it. We have to stop all this.

Sri C. J. MUCKANNAPPA.—Do you know that there is *pagadi* system in Hubli whereby Rs. 20,000 to Rs. 30,000 are demanded?

Sri F. H. MOHSIN.—It may be in Bombay and elsewhere, but not in Hubli.

Sri C. J. MUCKANNAPPA.—Even in Bangalore it is rampant. They demand even a lakh of rupees.

Sri F. H. MOHSIN.—We are hearing about it in Bombay and not in Hubli or Bangalore.

Sri C. J. MUCKANNAPPA.—If the Hon'ble Member were to walk in Chickpet in Bangalore, he would know what they demand for each shop.

Sri F. H. MOHSIN.—This will not be a help or encouragement to the landlord for the construction of new buildings or for the repair of old buildings. So in my opinion, Sir, the definition of fair rent needs to be modified and the fair rent will have to be taken into consideration. For fixing the fair rent, the things that will have to be taken into consideration would be the rent prevailing in the locality and also the municipal assessment. As I have urged before, the authority to fix the fair rent should be given to the Civil Courts. Sri. Narasimhan quoted Section 30 relating to fixation of fair rents, percentage of accommodation and number of lodgers. He has also made a reference to the point that no criterion has been fixed for fixation of fair rent. But there is already a criterion that is mentioned under

(SRI F. H. MOHSIN)

Section 14 of the Rent Contro Act. Clause 14 (3) says:

"In fixing the fair rent under sub-clause (1) the Controller shall have due regard—

(*a*) in the Bombay Area,—

(*i*) to the rent at which the buildings were let on the first day of September 1940, or

(*ii*) where they were not let on the first day of September, 1940, to the rent at which they were last let before that day..."

So, the criterion has already been set down in Section 14.

There is also protection to tenant against eviction. If the tenant goes on paying the rent and deposits rent in court, there is always protection for the tenants. The tenants need not be baffled for anything else and this Rent Control Bill has come to protect the tenants from eviction. This is a Bill in furtherence of bringing uniformity in rent control Act and I commend this Bill for the consideration of this House.

Sri F. W. CORBETT (Nominated).— Mr. Speaker, Sir, I rise to support this Bill. In doing so, I would like to draw the attention of the House to some of the definitions here. Clause 3 (*a*) refers to definition of 'building.' As Sri Mohsin very rightly mentioned just now, it is not right to have people of different ways of living in the same locality. It is even more dangerous if people of different temperaments are living in the same house. If you have objectionable people living under the same roof it will be difficult. There might be an obnoxious man living on the one side and a lady on the other side. One man may be a drunkard and another a sober man. Six months ago, there was even a murder committed because different people occupied the same house. So, I suggest that 'part of a building' should be removed from the definition. It should be only a full building. It is not a question of 'vegetarian' or 'non-vegetarian'. On the one side you might have a young man and on the other side you might have a man with two or three daughters. It is possible a lot of trouble will take place like that. I suggest therefore that so far as part of a building is concerned, it should be deleted from the definition.

Clause (*g*) of the same section says:

"hotel or lodging house means a building or a part of a building where lodging with or without board or other service is by way of *business* provided for a monetary consideration."

This clause should apply strictly for hotels run on *business lines* but should not apply to such cases where anyone takes in a friend for two or three months. If that is so, it infringes the right of an individual to take in anyone he likes. If he is to comply with the provisions of the Bill he would have to take a licence and conform to the rules. I, therefore, suggest that people taking in up to three guests should not be considered as lodging houses.

Clause 4 (4), sub-clause (*i*) states that the section would not apply to a residential building the monthly rent of which does not exceed fifteen rupees. This limit of 15 rupees was fined some 20 years ago. Since then rents of buildings have gone four-fould. I suggest that instead of Rs. 15 it should be raised to Rs. 50.

Section 5 empowers the Controller to allot a vacant house to a public authority or a person. I do not think such a power should be given. Is uggest that the Controller should give it to any other person only with the approval of the landlord or the person letting the house. At present the Controller arbitrarily puts anybody in the building and that man gives endless trouble to the landlord. The landlord finds it difficult to recover rents. I know cases where people put into houses by the Controller refused to pay rent. When the owner goes to the Controller he says that it is "your business. Go to

the courts of law." If the Controller has authority to force a tenant on a landlord, equally so should it be incumbent on him to collect the rent and pay it to the owner.

I am glad to find that the Bill is merely called 'Rent Control Bill.' The word 'Accommodation' has been omitted. I do not know if that has been done deliberately but in any case I think it is time that we eliminated all sorts of accommodation control. Accommodation control was introduced in 1941 during the war period and at that time people in the essential services were given priority in accommodation. Today there is no war emergency and I do not see why in allotting houses, the Controller should first satisfy even a clerk working in the post office as against an executive working in a firm. The Controller should only fix a fair rent and there should be no question of control over accommodation. I have a case brought to me of a person who for the last 14 months applied for no less than 19 buildings and did not get even one because a clerk or a petty official in the postal or railway and other Government departments got them. They are no longer essential services. That may have been the case during the war period. I suggest that accommodation should not be controlled but only rent should be controlled and if the Controller puts in any tenant in a building he should do it with the consent of the owner or the person letting the place.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೇಬಿಹಾಳ).— ಸ್ವಾಮಿ, ನಾನು ಮಾತನಾಡಲಿಕ್ಕೆ ಸಿದ್ಧ. ಆದರೆ ಕೆಲವು ವಿಷಯಗಳಿಗೆ ನಾನು ವಿರೋಧವಿದ್ದೇನೆ, ಕೆಲವು ಭಾಗಗಳಿಗೆ ನನ್ನ ಸಂಪೂರ್ಣ ಅನುಮತಿ ಇದೆ. ಮುಂಬೈ ರಾಜ್ಯದೊಳಗೆ ಇರತಕ್ಕ ಕಾಯಿದೆ ನಮಗೆ ಬಂದದ್ದಿದೆ. ಮುಂಬೈ ರಾಜ್ಯದೊಳಗೆ ಯಾವುದನ್ನು ನಾವು ವಿರೋಧಮಾಡುತ್ತಿದ್ದೇವೋ ಅದನ್ನೆಲ್ಲ ನಮ್ಮ ಮೇಲೆ ಮತ್ತೆ ಪೇರಲಿಕ್ಕೆ ಬಂದಿದ್ದಾರೆ. ಇದರ ಕಷ್ಟವನ್ನು ನಾವು ಅನುಭವಿಸಿದ್ದೇವೆ. ಆದುದರಿಂದ ಈ ಕಾಯಿದೆಯ ಆ ಭಾಗಕ್ಕೆ ನಾನು ವಿರೋಧ ಮಾಡುವವನಿದ್ದೇನೆ.

ಯಾರು ಬಾಡಿಗೆದಾರರಿರುತ್ತಾರೆಯೋ ಅವರು ಬಡವರಿರುತ್ತಾರೆ. ಆ ಬಾಡಿಗೆದಾರರಿಗೆ ಮನೆ ಸಿಕ್ಕಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಶ್ರೀಮಂತರಿದ್ದಾರೆ. ಹೆಚ್ಚು ಮಂದಿ ಬಡವರಿರುತ್ತಾರೆ. ಶ್ರೀಮಂತರು ಹೆಚ್ಚು ಶ್ರೀಮಂತರಾಗಬೇಕೆಂಬುದು ನನ್ನ ಇರಾದೆಯಲ್ಲ. ಬಾಡಿಗೆದಾರರಿಗೆ ಯೋಗ್ಯ ದರದಿಂದ ಬಾಡಿಗೆ ಕೊಟ್ಟು ವಾಸಮಾಡಲಿಕ್ಕೆ ಆಸ್ಪದವಾಗಬೇಕು. ಶ್ರೀಮಂತರು ಹೆಚ್ಚು ಮನೆ ಕಟ್ಟಿಸಬಹುದು. ಹಾಗೆ ಕಟ್ಟಿಸಿದರೆ ಬಡಬಗ್ಗರಿಗೆ ಇರುವುದಕ್ಕೆ ಅನ್ಪದವಾಗುತ್ತದೆ. ಬಾಡಿಗೆಯ ಮೇಲಿನ ನಿಯಂತ್ರಣವಿರಬೇಕು ಎಂದು ಹೇಳುತ್ತೇನೆ. ಅದರ ನಲುವಾಗಿ ನಾನು ಹೇಳುವುದೇನೆಂದರೆ, ಕೆಲವು ಭಾಗಗಳಿಗೆ ನನ್ನ ಕಬೂಲಿ ಇದೆ; ಕೆಲವು ಭಾಗಗಳಿಗೆ ವಿರೋಧವಿದೆ.

ಈ ಕಾಯಿದೆಯನ್ನು ದೊಡ್ಡ ದೊಡ್ಡ ಪಟ್ಟಣಗಳಿಗೆ, ಎರಡು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳಿಗೆ ಅನ್ವಯಿಸಿರಿ. ಎರಡು ಲಕ್ಷಕ್ಕಿಂತ ಕಡಮೆ ಜನಸಂಖ್ಯೆ ಇರುವ ಕಡೆಗಳಿಗೆ ಅನ್ವಯಿಸಬೇಡಿರಿ ಎಂದು ಹೇಳುವವನಿದ್ದೇನೆ. ಅದಕ್ಕೆ ಕಾರಣ ಹೇಳುತ್ತೇನೆ.

ಈಗ ಈ ಕಾಯಿದೆ ಹತ್ತು ವರ್ಷಗಳು ನಡೆಯುವಂಥಾದ್ದು ಎಂದು ಮಾಡಿದ್ದಾರೆ. ಇದರಿಂದ ಬಡಬಗ್ಗರಿಗೆ ಸಹಾಯ ಮಾಡಬೇಕೆಂಬ ಇರಾದೆ ಇದೆ. ಹತ್ತು ವರ್ಷಗಳು ಎಂದರೆ 1970 ಕ್ಕೆ ಮುಗಿಯುವ ಹಾಗೆ ಆಗುತ್ತದೆ. ಅಲ್ಲಿಂದ ಮುಂದೆ ಮತ್ತೆ ಒಂದೆರಡು ವರ್ಷ ಬೆಳೆಸಬಹುದು. ಇದು ಸರಿಯಲ್ಲ. ನಾನು ಹೇಳುವುದೇನೆಂದರೆ ಮೊದಲು ಐದು ವರ್ಷಗಳ ಕಾಲ ಇಟ್ಟುಕೊಳ್ಳಬಹುದು. ಐದು ವರ್ಷಗಳ ಅನಂತರ ಆಗಿನ ಪರಿಸ್ಥಿತಿಯನ್ನು ಗಮನಿಸಿ ಕೆಲವು ವರ್ಷಗಳ ಕಾಲ ಮುಂದುವರಿಸಬಹುದು. ಒಂದೇ ಸಲ ಹತ್ತು ವರ್ಷ ಕಾಲಕ್ಕೆ ಮಾಡುವುದು ಸೂಕ್ತವಲ್ಲ.

ಈ ಕಾಯಿದೆ ಕೆಲವು ಭಾಗಗಳಿಗೆ ಕೆಲವು ಜನಗಳಿಗೆ ಅನ್ವಯಿಸುತ್ತದೆ. ಮತ್ತು ಸರ್ಕಾರದವರು ಈ ವಿಧೇಯಕದಿಂದ ಬೇರೆ ಬೇರೆ ಪಟ್ಟಣಗಳಿಗಾಗಲೀ, ಹಳ್ಳಿಗಳಿಗಾಗಲೀ, ಅನ್ವಯಿಸುವುದಕ್ಕೆ ಅವಕಾಶವನ್ನು ತೆಗೆದುಕೊಂಡಿದ್ದಾರೆ. ಇದನ್ನು ಭಾರಿ ಪಟ್ಟಣಗಳಲ್ಲಿ ಹಚ್ಚಿ ಹಳ್ಳಿಗಳಿಗೆ ಹಚ್ಚಬೇಡಿ ಎಂದು ಹೇಳುತ್ತೇನೆ. ಈ ಕಾಯಿದೆಯನ್ನು ನಮ್ಮ ಮೇಲೆ ಹಚ್ಚಬೇಡಿರಿ ಎಂದು ಮಾನ್ಯ ಮಂತ್ರಿಗಳು ಪ್ರವಾಸ ಬಂದಿದ್ದಾಗ ಹೇಳಿದ್ದೆವು. ಅಲ್ಲದೆ ಈ ಕಾಯಿದೆಯನ್ನು ಹೇಗೆ ಬೇರೆ ಬೇರೆ ಜಾಗಗಳಿಗೆ ವಿನ್ಯಾತ ಮಾಡುವುದಕ್ಕೆ ಅಧಿಕಾರವನ್ನು ತೆಗೆದುಕೊಂಡಿರುತ್ತಾರೆಯೋ ಹಾಗೆಯೇ ಒಂದು ಕಡೆ ಹಚ್ಚಿರುವುದನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೂ ಸರ್ಕಾರಕ್ಕೆ ಅಧಿಕಾರವಿರಬೇಕು. ಈ ಅಂಶವನ್ನೂ ವಿಧೇಯಕದಲ್ಲಿ ಅಡಕಮಾಡಬೇಕೆಂದು ಸೂಚಿಸುತ್ತೇನೆ.

ಎರಡನೆಯದಾಗಿ ಅಕ್ವಿಸಿಷನ್ ಕ್ರಮಗಳನ್ನು ತೆಗೆದುಕೊಳ್ಳುವಾಗ ಒಬ್ಬ ಮನುಷ್ಯನ ಮನೆಯನ್ನು ಕಿತ್ತುಕೊಂಡು ಇನ್ನೊಬ್ಬ ಮನುಷ್ಯನಿಗೆ ಕೊಡುವುದು, ಒಬ್ಬನ ಆಸ್ತಿಯನ್ನು ತೆಗೆದುಕೊಂಡು ಮತ್ತೊಬ್ಬನಿಗೆ ಹಂಚುವುದು, ಅವನು ಕೊನೆಯಲ್ಲಿ ಮನೆ ಕೊಟ್ಟವನಲ್ಲದ್ದುದನ್ನೆಲ್ಲಾ ಕಸಿದುಕೊಂಡು ಹೋಗುವಂತೆ ಸರ್ಕಾರ ವ್ಯವಸ್ಥೆ ಮಾಡುತ್ತಿರುವುದನ್ನು ನಾನು ಒಪ್ಪುವುದಿಲ್ಲ. ಪಬ್ಲಿಕ್ ಪರ್‌ಪಸ್‌ಗೋಸ್ಕರ ಕಾನೂನು ಏನೋ ಮಾಡಬೇಕು. ಆದರೆ ಅವರು ಮಾಡುತ್ತಾ ಇರುವುದನ್ನು ನೋಡಿದರೆ ಆ ರೀತಿ ಉದ್ದೇಶ ಸಾಧನೆ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಅಷ್ಟಾಗಿಲ್ಲವೆಂದು ಚೆನ್ನಾಗಿ ಕಾಣುತ್ತದೆ. ಕಾರ್ಸ್ಟಿಟ್ಯೂಷನ್ ಪ್ರಕಾರ ಪಬ್ಲಿಕ್ ಪರ್‌ಪಸ್ ಸಾಧನೆ ಮಾಡದೆ ಇದ್ದರೆ, ಬೇರೆಯಾವ ಉದ್ದೇಶಕ್ಕೂ ಅಕ್ವೈರು ಮಾಡುವುದಕ್ಕಾಗುವುದಿಲ್ಲ. ಎಂಟನೆಯ ಕಲಂನಲ್ಲಿ "Procedure to be followed before ordering leasing of any building for a public authority or other person" ಎಂದು ಹೇಳಿದ್ದೀರಿ. ಈ ರೀತಿ ಮಾಡುವುದಕ್ಕೆ ಕಾರ್ಸ್ಟಿಟ್ಯೂಷನ್ ಪ್ರಕಾರ ಸರ್ಕಾರಕ್ಕೆ ಅಧಿಕಾರವಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಮನೆ ಇಲ್ಲದವನಿಗೆ ಮನೆ ಕೊಡಿಸುವುದು ಪಬ್ಲಿಕ್ ಪರ್‌ಪಸ್ ಆಗುವುದಿಲ್ಲವೇ?

ಶ್ರೀ ಪಿ. ಜಿ. ಸಿದ್ಧಾಂತಿ.—ನ್ಯೂಕ್ಲಿಯರ್ ಬಿಲ್ಡಿಂಗ್ ಕಟ್ಟಿಸಿಕೊಡುವುದು, ಸರ್ಕಾರೀ ನೌಕರರಿಗೆ ಮನೆ ಕಟ್ಟಿಸಿಕೊಡುವುದು—ಇವೆಲ್ಲಾ ಪಬ್ಲಿಕ್ ಪರ್‌ಪಸ್ ಎಂದಾಗುತ್ತದೆ. ಆದರೆ ಯಾವನಾದರೂ ಒಬ್ಬ ವ್ಯಕ್ತಿಗೆ—ಅವನು ಬಡವನಿರಲಿ ಶ್ರೀಮಂತನಿರಲಿ—ಅಂಥವನಿಗೆ ಮಾಲೀಕನ ಮನಸ್ಸಿನ ವಿರುದ್ಧ ಮನೆ ಬಾಡಿಗೆಯಿಂದ ಕೊಡಿಸುವುದು ಅಕ್ವಿಜಿಷ್ಟ್ ಆಗುತ್ತಿದ್ದು, ಹಾಗೆ ಮಾಡಲಕ್ಕೆ ಬರುವುದಿಲ್ಲ. ಹಾಗೆ ಮಾಡಬಾರದು. ಮಾಲಿಕರು ಕೆಲವರು ಬಡವರಿದ್ದು ಅಂಥವರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಆ ರೀತಿ ಮಾಡುವುದು ಪಬ್ಲಿಕ್ ಪರ್‌ಪಸ್ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಜಿ. ವೆಂಕಟೇಗೌಡ.—ಹಾಗಾದರೆ ಸರ್ಕಾರೀ ನೌಕರರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟರೆ ಅದು ಪಬ್ಲಿಕ್ ಪರ್‌ಪಸ್ ಎಂದಾಗುತ್ತದೆಯೇ?

ಶ್ರೀ ಪಿ. ಜಿ. ಸಿದ್ಧಾಂತಿ.—ಅದೆಲ್ಲಾ ಬೇರೆ. ಬೊಂಬಾಯಿ ಹೈಕೋರ್ಟಿನವರು ಸರ್ಕಾರಿ ನೌಕರರಿಗೆ ಬಾಡಿಗೆ ಕೊಡುವುದು ಪಬ್ಲಿಕ್ ಪರ್‌ಪಸ್ ಎಂದು ತೀರ್ಮಾನಿಸಿರುವರು. ಆ ತೀರ್ಮಾನಿನ ವಿರುದ್ಧ ಹೋಗುವುದು ಶಕ್ಯವಿಲ್ಲ. ಅಕ್ವಿಜಿಷ್ಟ್ ಕಲಮ್‌ಗಳು ವಿಜಾಪುರ, ಜಮಖಂಡಿ, ಬಾಗಲಕೋಟೆ ಪಟ್ಟಣಗಳಿಗೆ ಈ ವಿಧೇಯಕದಿಂದ ಹೊಸದಾಗಿ ಹಚ್ಚುತ್ತಾರೆ. ಈ ಪಟ್ಟಣಗಳಿಗೆ ನನ್ನ ಸಮ್ಮತಿ ಇರುವುದಿಲ್ಲ. ನಾನು ವಿಜಾಪುರದಿಂದ ಬಂದವನು; ನಮ್ಮ ಭಾಗದವರಿಗೆ ಇದರಿಂದ ತ್ರಾಸವಾಗುತ್ತದೆ.

ಎರಡನೆಯದಾಗಿ ಈ ಕಲಂನಲ್ಲಿ ಸಬ್‌ಸೆಕ್ಷನ್ ನಾಲ್ಕರಲ್ಲಿ ಬಾಡಿಗೆಯ ವಿಷಯವನ್ನು ತಂದುಹಾಕಿದ್ದೀರಿ. ಮಾಹೆಯಾನ ಬಾಡಿಗೆ 15 ರೂಪಾಯಿಗಳಿಗಿಂತ ಹೆಚ್ಚಿದ್ದರೆ ಮಾತ್ರ ಮಾಲೀಕನು ಒಬ್ಬ ಬಾಡಿಗೆದಾರನು ಬಿಟ್ಟುಹೋದಬಳಿಕ ಕಂಟ್ರೋಲರನಿಗೆ ನೋಟೀಸ್ ಕೊಡಬೇಕಾಗುತ್ತದೆ. 15 ರೂಪಾಯಿಗಳವರೆಗೆ ಬಾಡಿಗೆ ಇದ್ದರೆ ನೋಟೀಸ್ ಕೊಡುವ ಅಗತ್ಯವಿಲ್ಲ. ಇದರಿಂದ ಬಡವರಿದ್ದು ಬಾಡಿಗೆದಾರನಾಗಲು ಮನೆಯನ್ನು ದೊರಕಿಸಲು ಕಂಟ್ರೋಲರ ಕಛೇರಿಯಿಂದ ಯಾವ ಸಹಾಯವು ಆಗುವುದಿಲ್ಲ. ಈ ವಿಧೇಯಕದಲ್ಲಿ ಹೇಳಿರತಕ್ಕ ನಾಲ್ಕನೆಯ ಕಲಂನ (2) ಮತ್ತು (3) ನೆಯ ಉಪ ಕಲಂಗಳನ್ನು ಬೇಕಾದರೆ ತಮ್ಮ ಮುಂದೆ ಓದಿ ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ವಿಧೇಯಕದ ಎರಡು ಮತ್ತು ಮೂರನೆಯ ಅಧ್ಯಾಯಗಳನ್ನು ಸಣ್ಣ ಪಟ್ಟಣಗಳಿಗೆ ಹಚ್ಚುವುದಿಲ್ಲ.

ಶ್ರೀ ಪಿ. ಜಿ. ಸಿದ್ಧಾಂತಿ.—ನಾನು ನಾಲ್ಕನೆಯ ಕ್ಲಾಜಿನ ಸಬ್ ಸೆಕ್ಷನ್ (4) ರಲ್ಲಿ ಹೇಳಿರುವುದನ್ನೇ ಕನ್ನಡದಲ್ಲಿ ಹೇಳುತ್ತಿದ್ದೇನೆ. 15 ರೂಪಾಯಿಗಳ ಬಾಡಿಗೆ ಬರುವುದಕ್ಕೆ ನೋಟೀಸ್ ಕೊಡಬೇಕು ಎಂದು ಹೇಳಿಲ್ಲ. ಅನೇಕರು ಬಡಬಗ್ಗರು ಬಾಡಿಗೆದಾರರು ಇರುತ್ತಾರೆ. ಇಂತಹ ಸಂದರ್ಭದಲ್ಲಿ ಮಾಲೀಕನು ಕಂಟ್ರೋಲರಿಗೆ ನೋಟೀಸ್ ಕೊಡುವುದು ಕಾರಣವಿಲ್ಲ. ಶ್ರೀಮಂತರು ಮನೆಗಳನ್ನು ಬಾಡಿಗೆಗೆ ಪಡೆಯುವಾಗ ಕಂಟ್ರೋಲರ್ ಕಛೇರಿಯಲ್ಲಿ ಆಯಾ ಮನೆಗಳು ಬಾಡಿಗೆಗೆ ಸಿಕ್ಕುವುದೆಂದು ತಿಳಿಯುತ್ತದೆ ಮತ್ತು ಬಾಡಿಗೆಗೆ ಹಿಡಿಯಬಹುದು. ಆದರೆ ಬಡವನಾದವನು ಒಂದು ಮನೆಗೆ ಬಾಡಿಗೆಗೆ ಬರಬೇಕಾದರೆ ಒಬ್ಬ ಸಣ್ಣ ಗುಮಾಸ್ತನಾಗಲಿ ಒಂದು ಬಾಡಿಗೆ ಮನೆಗೆ ಬರಬೇಕಾದರೆ, ಅವನು ಕಲೆಕ್ಟರನ್ನಾಗಲೀ, ಅಥವಾ ಕಂಟ್ರೋಲರನ್ನಾಗಲೀ ಕೇಳಿದರೆ ಯಾವ ಮನೆ ಸಿಕ್ಕಲು ಶಕ್ಯವಿದೆಂದು ತಿಳಿಯಲು ಶಕ್ಯವಿಲ್ಲ. ಆದುದರಿಂದ ಈಗ ಇದರಲ್ಲಿ ಶ್ರೀಮಂತರಿಗೆ ಅನುಕೂಲವಾಗುವಂತೆ ಮಾಡುವುದು ಸರಿಯಲ್ಲ. ಬಡಬಗ್ಗರಿಗೆ ಅನುಕೂಲ ಮಾಡಿ. 15 ರೂಪಾಯಿಗಳು ಜಾಸ್ತಿ. ಅದನ್ನು ಕಡಮೆ ಮಾಡಿ. ಭೇದಭಾವ ಬೇಡ. ಇದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಜನಸಂಖ್ಯೆ ಕಡಮೆ ಇರುವ ಪ್ರದೇಶಗಳಲ್ಲಿ ಈ ಕ್ಲಾಜನ್ನು ಹಚ್ಚುವುದು ಸರಿಯಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕಾನೂನುಗಳು ಎರಡು ಲಕ್ಷ ಪ್ರಜಾಸಂಖ್ಯೆ ಇರುವ ಪಟ್ಟಣಗಳಿಗೆ ಮಾತ್ರ ಅನ್ವಯಿಸುವಂತಾಗಬೇಕು.

ಇನ್ನು leasing of vacant buildings ವಿಷಯದಲ್ಲಿ ನಾನು ಹೆಚ್ಚು ಹೇಳಲಿಕ್ಕೆ ಬಯಸುವುದಿಲ್ಲ. ಏಕೆಂದರೆ ಆ ಬಗ್ಗೆ ಬೊಂಬಾಯಿ ಆಕ್ಟ್ ಪ್ರಕಾರ ಕಾನೂನು ಮಾಡಿದೆ. ನನ್ನ ಸ್ನೇಹಿತರಲ್ಲಿ ಅನೇಕರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದಾರೆ.

ಇನ್ನು Statement of objects and reasons ನಲ್ಲಿ ಎಲ್ಲಾ ರಾಜ್ಯಗಳಿಗೂ ಅನ್ವಯಿಸುವಂತಹ ಏಕರೂಪವಾದ ಕಾಯಿದೆಯನ್ನು ಜಾರಿ ಮಾಡುತ್ತೇವೆಂದು ಹೇಳಿದ್ದಾರೆ. ಕಾನೂನುಗಳು ಒಂದು ಭಾಗಕ್ಕೆ ಒಂದು ತರಹ, ಇನ್ನೊಂದು ಭಾಗಕ್ಕೆ ಇನ್ನೊಂದು ತರಹ ಇರಕೂಡದು. ಯಾವ ಯಾವ ರಾಜ್ಯದಲ್ಲಿ ಯಾವ ಯಾವ ತರಹದ ಕಾನೂನುಗಳಿವೆ ಎಂಬುದನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ಯಾವ ತರಹ ತಕರಾರೂ ಬಾರದ ರೀತಿಯಲ್ಲಿ ಏಕರೂಪವಾದ ಶಾಸನವನ್ನು ಜಾರಿಗೆ ತರಬೇಕು. ಮೊದಲು ಡೆಪ್ಯುಟಿ ಕಲೆಕ್ಟರ್, ಮಾಮಲೇದಾರ ಎಂದು ಕರೆಯುತ್ತಿದ್ದರು. ಅವೆಲ್ಲ ತೆಗೆದು ಹಾಕಿ ಡೆಪ್ಯುಟಿ ಕಮೀಷನರ್, ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರ್ ಎಂದು ಒಂದೇ ತರಹ ಮಾಡಿರುತ್ತಾರೆ. ಆದರೆ ಒಂದೇ ತರಹದ ಕಾಯಿದೆ ಮಾಡಿಲ್ಲ. ಒಂದೇ ತರಹದ ಕಾಯಿದೆ ರಾಜ್ಯದ ಎಲ್ಲಾ ಭಾಗಗಳಿಗೆ ಹಚ್ಚಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಕಾಯಿದೆ ಬೇರೆ ಮಾಡುವುದಿಲ್ಲ. ಬಾಡಿಗೆಯನ್ನು ನಿಗದಿ ಮಾಡುವಾಗ ಯಾವ ಯಾವ ಪ್ರದೇಶದಲ್ಲಿ ಮೊದಲು ಯಾವ ಯಾವ ರೀತಿಯಲ್ಲಿತ್ತು, ಕಾಯಿದೆ ಜಾರಿಗೆ ಬಂದಾಗ್ಗೆ ಯಾವ ರೀತಿಯಾದಂಥ ಬಾಡಿಗೆ ಇರಬೇಕು ಎಂಬುದನ್ನೆಲ್ಲಾ ಗಣನೆಗೆ ತೆಗೆದುಕೊಂಡು ತೀರ್ಮಾನ ಮಾಡಬೇಕೆಂಬುದನ್ನು ಈ ವಿಧೇಯಕದಲ್ಲಿ ಸೂಚನೆ ಮಾಡಿದ್ದೇವೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಇದನ್ನು ಎಷ್ಟು ದಿವಸಗಳಿಂದ ಮಾಡುತ್ತಿದ್ದೀರಿ? ಇನ್ನೆಷ್ಟು ದಿವಸಗಳು ಬೇಕಾಗುತ್ತವೆ? ಕೇವಲ ಕಾಯಿದೆ ಮಾಡಬೇಕೆಂದು ವೃಥಾ ಇಷ್ಟು ದುಡ್ಡು ಖರ್ಚು ಮಾಡುವುದಕ್ಕೆ ಸರ್ಕಾರಕ್ಕೆ ಏಕೆ ಅಧಿಕಾರವಿರಬೇಕು? ಈ ಬಗ್ಗೆ ಏಕರೂಪವಾದ ಕಾಯಿದೆ ಜಾಗ್ರತೆ ಜಾರಿಗೆ ಬರಬೇಕು ಎಂಬುದಾಗಿ ನಾನು ಹೇಳುತ್ತೇನೆ.

12-30 P. M.

ತಾವು ಕಾಯಿದೆಯನ್ನು ಮಾಡುವಾಗ ದೇಶದ ಎಲ್ಲ ಭಾಗಗಳಿಗೂ ಒಂದೇ ರೀತಿಯಾಗಿರತಕ್ಕ ಕಾಯಿದೆಗಳನ್ನು ಮಾಡಿ. ಹಾಗೆ ಮಾಡದೆ ನಮ್ಮಲ್ಲಿರತಕ್ಕ ಕಾಯಿದೆ ನಮ್ಮಲ್ಲೇ ಉಳಿಯಲಿ, ನಿಮ್ಮಲ್ಲಿರತಕ್ಕ ಕಾಯಿದೆ ನಿಮ್ಮಲ್ಲೇ ಉಳಿಯಲಿ, ಮತ್ತೊಂದು ಭಾಗ

ದಲ್ಲಿರತಕ್ಕವರಿಗೆ ಕಾಯಿದೆ ಅವರಿಗೆ ಹಾಗೇ ಉಳಿಯಲಿ ಎಂದೆನ್ನುವುದಾದರೆ ಈ ದಿವಸ ನಾವೆಲ್ಲರೂ ಇಷ್ಟೊಂದು ಜನರು ಇಲ್ಲಿಗೇಕೆ ಬಂದು ಕುಳಿತುಕೊಳ್ಳಬೇಕಾಗಿತ್ತು ? ಆದುದರಿಂದ ಒಂದು ರಾಜ್ಯದಲ್ಲಿ ಒಂದೊಂದು ಭಾಗಕ್ಕೆ ಒಂದೊಂದು ಕಾಯಿದೆ ಅನ್ವಯಿಸುವುದು ಸರ್ವಥಾ ಯೋಗ್ಯವಾದುದಲ್ಲ. ತಾವು ಯಾವುದೇ ಒಂದು ಕಾಯಿದೆ ಮಾಡಿದರೂ ಅದು ಇಡಿಯ ರಾಜ್ಯದ ಎಲ್ಲ ಭಾಗಗಳಿಗೂ ಒಂದೇ ರೀತಿಯಾಗಿ, ಅಂದರೆ, uniform ಆಗಿರುವಂತೆ ಮಾಡುವ ಹಾಗಿದ್ದರೆ ಮಾಡಿ ಎಂದು ಸರ್ಕಾರದವರಲ್ಲಿಯೂ ಸೆಲೆಕ್ಟ್ ಸಮಿತಿಯವರಲ್ಲೂ ನನ್ನದೊಂದು ಈ ವಿನಂತಿ ಇದೆ.

ಈಗಾಗಲೇ ಮಾತನಾಡಿದ ಶ್ರೀಮಾನ್ ಮೊಹಿಸೀನ್ ಅವರು ಮುನಿಸಿಪಾಲಿಟಿ ನರಹದ್ದಿನಲ್ಲಿರತಕ್ಕ ಮನೆಗಳಿಗೆ 1947ರಲ್ಲಿ ಅಂದಾಜು 20 ಅಥವಾ 25 ರೂಪಾಯಿಗಳು ತಿಂಗಳಿಗೆ ಬಾಡಿಗೆಯಿದ್ದರೆ ಈಗ 1959 ರಲ್ಲಿ ಅದೇ ಮನೆಗೆ ತಿಂಗಳು ಒಂದಕ್ಕೆ 60 ರೂಪಾಯಿಗಳು ಬಾಡಿಗೆ ಎಂದು ಮಾಡಬಹುದೆಂದು ಹೇಳಿದರು. ಆಗ್ಗೆ 20-25 ರೂಪಾಯಿಗಳ ಬಾಡಿಗೆಯಿದ್ದ ಮನೆಯೇ ಈ ದಿವಸ 60 ರೂಪಾಯಿಗಳ ಬಾಡಿಗೆ ತರಬಹುದೆಂದು ಅವರು ಹೇಳಿದ್ದಾರೆ ಎಂದರೆ ಮುನಿಸಿಪಾಲಿಟಿಯವರು ಇಂಥ ಫಲಾನೆ ಮನೆ ಈ ದಿವಸ 60 ರೂಪಾಯಿಗಳ ಬಾಡಿಗೆ ತರುತ್ತದೆ ಎಂದು ಅವರು ಭಾವಿಸಿದರೆ ಆ ಮನೆಗೆ 60 ರೂಪಾಯಿಗಳ ಬಾಡಿಗೆಗೆ ತಕ್ಕ ಹಾಗೆ ಟ್ಯಾಕ್ಸ್ ಹಾಕಿ ಬಿಡುತ್ತಾರೆ. ಯಾವಾಗ ಮುನಿಸಿಪಾಲಿಟಿಯವರು ಟ್ಯಾಕ್ಸ್ ಜಾಸ್ತಿ ಮಾಡುತ್ತಾರೋ ಅದಕ್ಕೆ ತಕ್ಕಂತೆ ಮನೆ ಮಾಲೀಕನೂ ಸಹ ಬಾಡಿಗೆಯನ್ನು ಜಾಸ್ತಿ ಮಾಡಿಯೇ ಮಾಡುತ್ತಾನೆ. ಹೀಗೆ ಈ ದಿವಸ ಈ ಮುನಿಸಿಪಾಲಿಟಿಯವರು ಕಂದಾಯಗಳನ್ನು ಹೆಚ್ಚು ಮಾಡುತ್ತಿರುವುದರಿಂದ ಮನೆ ಬಾಡಿಗೆಗಳು ಆ ದಾಮಾಷದಲ್ಲಿ ಹೆಚ್ಚಾಗುತ್ತಿವೆ. ಯೋಗ್ಯವಾದ ಸಂದರ್ಭಗಳಲ್ಲಿ ಹಾಗೆ ಮಾಡಿದರೂ ಪರವಾ ಇಲ್ಲ. ಆದರೆ ಈ ರೀತಿ ಕಂದಾಯವನ್ನು ಜಾಸ್ತಿ ಮಾಡಲಿಕ್ಕೂ ಒಬ್ಬ ಅಪಲೇಟ್ ಅಧಿಕಾರಿಗಳಿದ್ದಾರೆ. ಅವರು ಈ ಬಾಡಿಗೆ ಈ ಮನೆಗೆ ಯೋಗ್ಯವಾಗಿದೆ ಎಂದು ಹೇಳಿದರೆ ಅಷ್ಟೇ ಬಾಡಿಗೆಯನ್ನು ಆ ಮನೆಗೆ ನಿಗದಿಮಾಡಬೇಕಾಗುತ್ತದೆ. ಇತ್ತೀಚೆಗೆ ಭಾರತ ಸರ್ಕಾರದ ಹಣಕಾಸಿನ ಸಚಿವರೇ 1949 ರಲ್ಲಿ ಒಂದು ರೂಪಾಯಿದ್ದಂಥ ಬೆಲೆ 1959 ರಲ್ಲಿ ಇಲ್ಲ; ಆ ಬೆಲೆ ಈಗ ಕಡಮೆಯಾಗಿದೆ ಎಂದು ಹೇಳಿದ್ದಾರೆ. ಆ ದಿವಸ ಒಂದು ರೂಪಾಯಿಗೆಷ್ಟು ಸಾಮಾನುಗಳು ಬರುತ್ತಿದ್ದವೋ ಅಷ್ಟು ಸಾಮಾನುಗಳು ಈ ದಿವಸ ಒಂದು ರೂಪಾಯಿಗೆ ಬರುತ್ತಿಲ್ಲವೆಂದು ಅವರೇ ಹೇಳಿರುವಾಗ ಈ ದಿವಸ ಬಾಡಿಗೆಯನ್ನು ಹೆಚ್ಚು ಹೆಚ್ಚಿಗೆ ಕೊಡುತ್ತಿದ್ದೇವೆಂಬ ಪ್ರಶ್ನೆಯೇ ಬರುವುದಿಲ್ಲ. ಆದರೆ 1949ರಲ್ಲಿ ಕಾಲ ಬಹಳ ಸರಿಯಾಗಿದ್ದಿತು. ಆಗ್ಗೇನೋ 4 ಆಣೆಗೆ ಹೊಟ್ಟೆತುಂಬ ತಿನ್ನುತ್ತಿದ್ದೆ. ಆದರೆ ಈಗ ಎಲ್ಲಾ ದುಬಾರಿಯಾಗಿಬಿಟ್ಟಿದೆ; ಕಡಮೆ ತಿನ್ನಿ ಎಂದು ಹೇಳಿದರೆ ಅದು ಆಗತಕ್ಕ ಮಾತಲ್ಲ. ಆದುದರಿಂದ ಬಾಡಿಗೆದಾರರಿಗೆ ಮನೆಗಳನ್ನು ಸ್ವಲ್ಪ ಸೋವಿದರದಲ್ಲೇ ಕೊಡಬೇಕೆಂದು ಹೇಳುತ್ತೇನೆ. 1949ರಲ್ಲಿ ರೂಪಾಯಿಗೆ ಪೂರ್ಣ ಬೆಲೆಯಿತ್ತು. ಈಗ ಸ್ವಲ್ಪ ಕಡಮೆಯಾಗಿದೆ. ಈ ಅಂಶವನ್ನು ಸರ್ಕಾರದವರು ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಯಾವ ಯಾವ ಮನೆಗಳಿಗೆ ಬಾಡಿಗೆ ಸ್ವಲ್ಪ ಮಟ್ಟಿಗೆ ಜಾಸ್ತಿಮಾಡಲು ಯೋಗ್ಯವಾದುದೆಂದು ಕಂಡು ಬರುತ್ತದೋ ಅಂಥ ಸಂದರ್ಭಗಳಲ್ಲಿ ಮಾತ್ರ ಈ ಕಾನೂನನ್ನು ಅನ್ವಯ ಮಾಡಿ ರೆಂಟ್ ಫಿಕ್ಸ್ ಮಾಡಬೇಕಾದ್ದು ಯೋಗ್ಯ ಎಂದು ಹೇಳುತ್ತೇನೆ. ಆದರೆ ಈ ಫೇರ್ ರೆಂಟನ್ನು ಫಿಕ್ಸ್ ಮಾಡುವ ಅಧಿಕಾರವನ್ನು ಸಿವಿಲ್ ಕೋರ್ಟುಗಳಿಗೆಕೊಡಬೇಕೆಂದು ಹೇಳುತ್ತೇನೆ. ನಾನು ಈ ವಿಚಾರವನ್ನು ಕೇವಲ ಜನರ ಹಿತದ ನಲುವಾಗಿ ಹೇಳುತ್ತಿದ್ದೇನೆ. ಕಾರಣವೇನೆಂದರೆ, ಜನರಿಗೆ ಸಿವಿಲ್ ಕೋರ್ಟುಗಳ ವಿಚಾರದಲ್ಲಿ ಇನ್ನೂ ವಿಶ್ವಾಸವಿದೆ. ಸರ್ಕಾರದವರು ಈ ದಿವಸ ಈ ಅಧಿಕಾರವನ್ನು ಎಂದರೆ, ರೆಂಟ್ ಫಿಕ್ಸ್ ಮಾಡುವ ಅಧಿಕಾರವನ್ನು ಅವರ ಕೈಕೆಳಗಿನ ಅಧಿಕಾರಿಗಳಿಗೆ ಏನು ಕೊಡಬೇಕೆಂದಿದ್ದಾರೋ ಅದೇ ಅಧಿಕಾರವನ್ನು ಆ ಸಿವಿಲ್ ಕೋರ್ಟುಗಳಿಗೆ ಕೊಟ್ಟುಬಿಡಿ ಎಂಬುದು ನನ್ನ ವಿನಂತಿ. ಈ ಪುರಾವಿಗಳನ್ನೆಲ್ಲಾ ಪರಿಶೀಲನೆಮಾಡುವುದನ್ನು ಆ ದಿವಾನಿ ಕೋರ್ಟಿಗೆ ವಹಿಸುವುದು ಯೋಗ್ಯವಾಗಿದೆ. ಆದರೆ ಈ ಪುರಾವೆಗಳನ್ನು ಒದಗಿಸುವುದು ನಮ್ಮ ಅಧಿಕಾರಿಗಳಲ್ಲಿ ಇರಲಿ; ಡಿಸ್ಟ್ರಿಕ್ಟ್ ಕೋರ್ಟನ್ನು ಅಪಲೇಟ್ ಅಥಾರಿಟಿಯಾಗಿ ನೇಮಿಸಿದೆಯಲ್ಲ ಎಂದು ಹೇಳಬಹುದು. ಆದರೆ ಆ ಬಗ್ಗೆ ನನ್ನ ಸಮುಜೂತು ಇಷ್ಟೆ ಇದೆ : ಬುಡದಿಂದಲೇ ಪುರಾವೆಗಳ ತಪ್ಪು ಮಾಡಿಕೊಂಡು ಬಂದಿದ್ದರೆ ಕಡೆಯಲ್ಲಿ ಅದನ್ನು ಸರಿಪಡಿಸುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಅಧಿಕಾರವನ್ನು ಮೊದಲೇ ಕೋರ್ಟಿಗೆ ವಹಿಸಿಬಿಡಿ ಎಂದು ಹೇಳುತ್ತೀದ್ದೇನೆ. ಆದರೆ ನಾನು ಸರ್ಕಾರದ ಮೇಲೆ ಯಾವ ಆರೋಪವನ್ನೂ ಮಾಡುತ್ತಿಲ್ಲ. ಸರ್ಕಾರದ ಕೆಲಸ ನಡೆಸತಕ್ಕ ಅಪಲ್ಯಾರರು ಮುಂತಾದವರನ್ನು ಮಾತ್ರ ನಾನು ಆರೋಪಣೆಗೆ ಗುರಿ ಮಾಡುತ್ತಿದ್ದೇನೆ. ದಿವಾನಿ ಕೋರ್ಟಿನಲ್ಲಿರತಕ್ಕವರಾದರೋ ಅವರೆಲ್ಲರೂ ಜಡ್ಜಿಗಳಾಗಿರತಕ್ಕವರು. ಅವರಲ್ಲಿ ಜನರಿಗಿನ್ನೂ ವಿಶ್ವಾಸವಿದೆ.

ಇನ್ನು ಈ ಷಾಪುಗಳ ಬಾಡಿಗೆಯ ವಿಚಾರಕ್ಕೆ ಬಂದರೆ—ಹಿಂದೆ 1949ರಲ್ಲಿ ಒಬ್ಬನು ಏನು ಒಂದು ಅಂಗಡಿ ಬಾಡಿಗೆ ಕೊಡುತ್ತಿದ್ದನೋ ಆತನು ಈಗಲೂ ಅಷ್ಟೇ ಕೊಡುತ್ತಿದ್ದಾನೆ. 1949ರಲ್ಲಿ ಆತನಿಗೆ 2,000 ರೂಪಾಯಿಗಳ ಸಂಪಾದನೆಯಿದ್ದುದು ಈ ದಿವಸ 3,000-4,000 ರೂಪಾಯಿಗಳ ತನಕ ಏರಿರುತ್ತದೆ. ಈದಿನ ರೂಪಾಯಿಯ ಕಿಮ್ಮತ್ತು ಕಡಮೆಯಾಗಿದೆಯೆಂಬ ನೆಪದ ಮೇಲೆ ವ್ಯಾಪಾರಿಗಳಿಗೆ ಹಿಂದಿನ ಒಂದು ಸಾವಿರ ರೂಪಾಯಿಗಳ ವರಮಾನವಿರುವ ಕಡೆ ಈ ದಿವಸ 4,000 ರೂಪಾಯಿಗಳ ತನಕ ಫಾಯಿದೆ ಆಗಿರಬಹುದು. ಈ ವ್ಯಾಪಾರಿಗಳಲ್ಲಿ ಯಾರು ಯಾರ ಯೋಗ್ಯತೆ ಎಸ್ಟಿರತ್ತದೆಯೋ ಅವರೆಲ್ಲರಿಗೂ ಅಷ್ಟಷ್ಟರಮಟ್ಟಿಗೆ ಫಾಯಿದೆಯಾಗಿದೆ. ಆದರೆವಾಸಕ್ಕೆ ಕೊಡತಕ್ಕ ಮನೆಗಳ ಬಗ್ಗೆ ಬಾಡಿಗೆ ಜಾಸ್ತಿಯಾದರೆ ಹಿಂದೆ 1949ರಲ್ಲಿ ಆ ಸ್ಥಿತ್ಯಂತರಗಿದ್ದ ಬೆಲೆ ಈ ದಿವಸ ಜಾಸ್ತಿಯಾಗಿದೆ ಎಂಬುದನ್ನೇನೋ ಒಪ್ಪಿಕೊಳ್ಳಬಹುದು. ಆದರೂ ಯೋಗ್ಯವಾದ ಸಂದರ್ಭಗಳಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಬಾಡಿಗೆಯನ್ನು ಜಾಸ್ತಿ ಮಾಡಬಹುದೆಂದು ನಾನಾಗಲೇ ಹೇಳಿಬಿಟ್ಟಿದ್ದೇನೆ. ಅದೇ ರೀತಿ ಈ ಷಾಪುಗಳವರಿಗೆ ಏಕೆ ಬಾಡಿಗೆಯನ್ನು ಜಾಸ್ತಿ ಮಾಡಬಾರದು ? ನನಗೇನೋ ಈ ಷಾಪುಗಳ ವಿಚಾರದಲ್ಲಿ ಕಡಮೆ ಬಾಡಿಗೆಗೆ ಕೊಡಲು ಇಷ್ಟವಿಲ್ಲ. 1949 ರಿಂದಲೂ ಯಾರು ಯಾರು ವ್ಯಾಪಾರ ಮಾಡುತ್ತಿದ್ದಾರೆ, ಅವರು ವರ್ತಕರೇ ಆಗಿರಲಿ, ಚೈಪಿಸ್ಟ್‌ಗೇ ಆಗಿರಲಿ-ಇವರುಗಳಿಗೆಲ್ಲ ಬಾಡಿಗೆ ಜಾಸ್ತಿ ಆಗಲೇಬೇಕು. 1949 ರಲ್ಲಿ ತಿಂಗಳಿಗೆ 10 ರೂಪಾಯಿ ಬಾಡಿಗೆ ಕೊಟ್ಟ ದುಡಿಮೆ ಆ ದಿವಸ ಏನು ಮಾಡುತ್ತಿದ್ದಾರೋ ಅದರ ನಾಲ್ಕು ಪಟ್ಟು ಜಾಸ್ತಿ

(ಶ್ರೀ ಪಿ. ಜಿ. ಸಿದ್ಧಾಂತಿ)

ದುಡಿಮೆಯನ್ನು ಅವರು ಈ ದಿವನ ಮಾಡುತ್ತಿದ್ದಾರೆ. ಆದರೆ ಕೇವಲ ವಾಸಕ್ಕೆ ಮನೆಗಳನ್ನು ಕಟ್ಟಿಸಿ ಕೊಟ್ಟರ ತಕ್ಕ ಮನೆ ಮಾಲೀಕರ ಆಸ್ತಿಗಳಿಗೆ ಈ ದಿವನ ಬೆರೆ ಏರಿದೆ ಎಂದು ಹೇಳಿ ಈ ಅಂಗಡಿ ಮಳಿಗೆಗಳ ಮಾಲೀಕರ ಆಸ್ತಿ ಬೆರೆ ಮಾತ್ರ ಹಿಂದಿದ್ದಷ್ಟೆ ಇರಲಿ ಎಂದು ಹೇಳುವುದು ಯಾವ ನ್ಯಾಯ? ಎಲ್ಲಾ ತರಹದ ವ್ಯಾಪಾರಿಗಳಿಗೂ ಈ ದಿವನ ವ್ಯಾಪಾರ ಹೆಚ್ಚಿನ ಫಾಯಿದೆಯನ್ನು ತರುತ್ತಿದೆ. ಆದುದರಿಂದ ಈ ಹೆಚ್ಚು ಫಾಯಿದೆಯಲ್ಲಿ ಸ್ವಲ್ಪ ಭಾಗವನ್ನು ಏಕೆ ಬಾಡಿಗೆ ರೂಪದಲ್ಲಿ ಜಾಸ್ತಿ ಮಾಡಿ ಮಾಲೀಕನಿಗೆ ಕೊಡಿಸಬಾರದು? ವಾಸದ ಮನೆಗಳಿಗೆ ಹೇಗೆ 1949ರಲ್ಲಿ ಕೊಡುತ್ತಿದ್ದುದಕ್ಕಿಂತ ಈಗ ಜಾಸ್ತಿಯಾಗಿರತ್ತದೆಯೋ ಆದೇ ಮಟ್ಟದಲ್ಲಿ ಈ ಷಾಪುಗಳಿಗೂ ಜಾಸ್ತಿ ಮಾಡಿ; ವಾಸದ ಮನೆಗಳಿಗೆ ಆದಷ್ಟೂ ಬಾಡಿಗೆಯನ್ನು ಕಡಮೆ ಮಾಡುವಂತೆ ಕಾನೂನು ಮಾಡಿ ಎನ್ನತಕ್ಕದ್ದೊಂದು ನನ್ನ ವಿನಂತಿ ಸರ್ಕಾರಕ್ಕೆ ಇದೆ. ಮುಂದೆ ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹೋಗತಕ್ಕದ್ದಾಗಿರುವುದರಿಂದ ಆ ಜಾಯಿಂಟ್ ಸೆಲೆಕ್ಟ್ ಸಮಿತಿಯವರೂ ಸಹ ಈ ವಿಚಾರಗಳನ್ನು ಅಂಗೀಕರಿಸಬೇಕೆಂಬುದಾಗಿ ಅವರಲ್ಲೂ ಸಹ ನನ್ನ ಈ ಒಂದು ವಿನಂತಿ ಇದೆ.

ಇನ್ನೊಂದು ವಿಚಾರ-ಬಾಡಿಗೆದಾರನಾಗಿರುವವನು ಬಾಡಿಗೆಯನ್ನು ಕೊಡದಿದ್ದರೆ ಆರು ತಿಂಗಳೊಳಗಾಗಿ ಅವನನ್ನು ಬಿಡಿಸಬೇಕೆನ್ನುವ Forfeiture Clause ನಮ್ಮಲ್ಲಿತ್ತು. ಅದನ್ನು ಇಲ್ಲ ತೆಗೆದು ಬಿಟ್ಟಿದ್ದಾರೆ. ಬಾಡಿಗೆ ಎಷ್ಟು ಕೊಡಬೇಕು ಎನ್ನುವುದಕ್ಕಾಗಿ ಮಾಲೀಕನಾದವನು ಸಿವಿಲ್ ಕೋರ್ಟಿಗೆ ಹೋಗಬೇಕಾಗುತ್ತದೆ. ಬಾಡಿಗೆದಾರನು ಇಷ್ಟೆ ಬಾಡಿಗೆ ಕೊಡಬೇಕೆನ್ನುವ ಕರಾರೂ ಇದೆ. ಅದರಂತೆ ಇಷ್ಟರೊಳಗೆ ಬಾಡಿಗೆ ಬರಲಿಲ್ಲ ಎಂದರೆ ಅಪೀಲು ಮಾಡುಲು ಕೋರ್ಟಿಗೆ ಹೋಗಬೇಕಾಗುತ್ತದೆ. ನನಗೆ ಇದರಲ್ಲಿ ಏನೂ ತಿಳಿಯುವುದಿಲ್ಲ. ವಿಧೇಯಕ ಮಾಡುವಾಗ ಈ ಬಗ್ಗೆ ವಿಚಾರಮಾಡಿದರೋ ಇಲ್ಲವೋ ತಿಳಿಯುವುದಿಲ್ಲ. ಇದಲ್ಲದೆ Forfeiture Clause ನ್ನು ಸಹ ತೆಗೆಯಲಾಗಿದೆ. ಹೀಗೆ ಮಾಡದೆ ಇದನ್ನೆಲ್ಲ ಕೋರ್ಟಿನ ಮಟ್ಟಿಗೆ ಬಿಟ್ಟರೆ ಹೇಗೆ? ವಿಧೇಯಕವನ್ನು ಮಾಡುವಾಗ ಹೀಗೆ ಮಾಡಿದರೆ ಇದು ಒಳ್ಳೆಯ ಕಾಯಿದೆಯಾಗುವುದಿಲ್ಲ. ಅಲ್ಲದೆ ಇದನ್ನು ಅಮಲು ಬಜಾವಣೆ ಹೇಗೆ ಮಾಡುವುದು? ಇದರಿಂದೇನೂ ಹೆಚ್ಚಿನ ಉಪಯೋಗ ಕಾಣುವುದಿಲ್ಲ. ಬಾಡಿಗೆದಾರರಿಗೂ ಅನುಕೂಲಮಾಡಿಕೊಡಿ. ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಸೆಲೆಕ್ಟ್ ಕಮಿಟಿಯಲ್ಲಿನ ಸಭಾಸದರು ಸರಿಪಡಿಸಬೇಕೆಂದು ವಿಜ್ಞಾಪನೆ ಮಾಡುತ್ತೇನೆ.

ಈ ವಿಧೇಯಕವನ್ನು ಎಲ್ಲ ಕಡೆಗೂ ವಿಸ್ತೃತಗೊಳಿಸಬೇಕೆಂದು ನಿಮ್ಮ ಮನಸ್ಸಿನಲ್ಲಿದೆ. ಈಗ ಮುಂಬೈ ಭಾಗದಲ್ಲಿ ಇರುವ ಕಾಯಿದೆಯ ಪ್ರಕಾರ ಮೈಸೂರು ಪಟ್ಟಣಕ್ಕೂ ವಿಸ್ತಾರಮಾಡಬೇಕು ಎಂದು ಮಾಡುವಾಗ ಯಾವ principle ಮೇಲೆ ವಿಸ್ತಾರಮಾಡಬೇಕೆನ್ನುವ ಬಗ್ಗೆ ಇದರಲ್ಲೇನೂ ಇಲ್ಲ. ಇಷ್ಟು ಜನಸಂಖ್ಯೆ ಇರುವ ಊರು ಮತ್ತು ಜನಸಂಖ್ಯೆಯಲ್ಲಿ ಎಂತೆಂತಹ ಕೆಲಸ ಮಾಡುವವರಿದ್ದಾರೆ ಎನ್ನುವುದರ ಬಗ್ಗೆ ಸರಕಾರಕ್ಕೆ ಏನಾದರೂ ವಿವರಗಳು ಬರುತ್ತಿವೆಯೇ? ಮನಸ್ಸಿಗೆ ಬಂದಂತೆ ಮಾಡಬೇಕು ಎಂದು ಕೆಲವಾರು ವಿಧಿಗಳನ್ನು ತೆಗೆದುಕೊಂಡು ಬಂದು ಅದರಂತೆ ಇಲ್ಲಿಯೂ ವಿಸ್ತಾರ ಮಾಡುತ್ತಿದ್ದೀರಾ? ಈ ವಿಧೇಯಕದಿಂದ ಜನತೆಯನ್ನು ಕೈಬಿಟ್ಟು ಬಿಡುತ್ತಿದ್ದೀರಿ. ಎಲ್ಲ ಊರುಗಳಿಗೂ ವಿಸ್ತಾರ ಮಾಡಬೇಕೆಂದರೆ ಒಂದೊಂದು ಕಡೆ ಒಂದೊಂದು ರೀತಿಯ ಬಾಡಿಗೆ ಪದ್ಧತಿ ಇದೆ. ಕಾಯಿದೆಯನ್ನು ಸರಿಯಾಗಿ ಮಾಡಬೇಕೆಂದು ಡೆಪ್ಯುಟೀ ಕಮಿಷನರಿಂದ ರೆಕಮೆಂಡೇಷನ್ನುಗಳೇನಾದರೂ ಬಂದಿವೆಯೇ? ಯಾವ ದೃಷ್ಟಿಯಿಂದ ತಾವು ವಿಸ್ತಾರಮಾಡಬೇಕೆಂದಿದ್ದೀರಿ? ಇಂತಹ ಪಟ್ಟಣಗಳಲ್ಲಿ ಇಷ್ಟಿಷ್ಟು ಜನಸಂಖ್ಯೆ ಇದೆ, ಅಥವಾ ಇಂತಿಂತಹ ಕಮರ್ಷಿಯಲ್ ಟ್ಯಾಕ್ಸು ಇದೆ ಅಥವಾ ಇಷ್ಟು ಜನಸಂಖ್ಯೆಗಿಂತ ಹೆಚ್ಚಾಗಿ ಇರುವ ಕಡೆ ಇದನ್ನು ಜಾರಿ ಮಾಡಬೇಕು ಎನ್ನುವ ಯಾವುದಾದರೂ ಒಂದು Principle ಮೇರೆಯೂ ಮಾಡಿಲ್ಲಿ. ಇಂತಹ ವಿಧೇಯಕದಿಂದ ಪ್ರಯೋಜನವಿಲ್ಲ. ಮುಂದೆ ಏನಾಗುತ್ತದೆಂದರೆ, ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಮಾಡಲು ಅವಕಾಶವಾಗುತ್ತದೆ. ಹೀಗೆ ಈ ವಿಷಯವನ್ನು ಅವರವರ ಮರ್ಜಿಗೇ ಬಿಡಬೇಡಿ.

ಇನ್ನು ಎರಡನೆದು ಷೆಡ್ಯೂಲಿನಲ್ಲಿ ಯಾವ ಯಾವ ಬಾಬು ಬರುತ್ತದೆ ಎಂದು ಮುಂಬಯಿ ಕಡೆಯಲ್ಲಿದ್ದಂತೆ 25,000 ಅಥವಾ 40,000 ಜನಸಂಖ್ಯೆಯ ಆಧಾರದ ಮೇಲೆ ಇಲ್ಲಿ ಏನೂ ನಿಗದಿ ಮಾಡಿಲ್ಲ. ಯಾವುದಾದರೂ ಒಂದು principle ಹಿಡಿದುಕೊಂಡು ಆ ಪ್ರಕಾರ ವಿಸ್ತಾರಮಾಡಿ. ವಿಸ್ತಾರ ಮಾಡಕೂಡದೆಂದು ನಾನು ಹೇಳುವುದಿಲ್ಲ. ಶ್ರೀ ಮಂತರೇ ಆಗಲಿ ಬಡವರೇ ಆಗಲೀ ಬಾಡಿಗೆದಾರನೇ ಆಗಲಿ, ಮಾಲೀಕರೇ ಆಗಲೀ ಅವರಿಗೆ ತ್ರಾಸಾಗದಂತೆ ಕಾನೂನನ್ನು ಮಾಡಿರಿ. ಇವನ್ನೆಲ್ಲ ಲಕ್ಷ್ಯಕ್ಕೆ ತೆಗೆದುಕೊಂಡು ಕಾಯಿದೆಯನ್ನೂ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಅಧ್ಯಕ್ಷರೇ,

ಹತ್ತು ನಿಮಿಷಗಳಲ್ಲೇ ನನ್ನ ಮಾತುಗಳನ್ನು ಮುಗಿಸಬೇಕೆಂದು ಹೇಳಿದ್ದೀರಿ. ಆದರೆ ನಾನು ಮಾತನಾಡತಕ್ಕ ವಿಷಯಗಳನ್ನು ಕೇವಲ ಮೂರೇ ನಿಮಿಷಗಳಲ್ಲಿ ಹೇಳಿ ಮುಗಿಸುತ್ತೇನೆ.

ನಾನು ಮಾತನಾಡಬೇಕೆಂದಿದ್ದ ವಿಷಯಗಳನ್ನು ಆಳುವ ಪಕ್ಷದಲ್ಲಿರುವ ನನ್ನ ಜೆಲ್ಲೆಯವರೇ ಆದ ಶ್ರೀ ಸಿದ್ಧಾಂತಿಯವರೇ ಹೇಳಿರುವುದು ಅಭಿಮಾನ ಪಡತಕ್ಕ ಸಂಗತಿ. ಕಾಂಗ್ರೆಸ್ಸಿಗೆ ಸೇರಿದ ಎಂ. ಎಲ್. ಎ. ಆಗಿದ್ದರೂ ಸಹ ಈ ರೀತಿಯಾಗಿ ಅವರು ವಿರೋಧವಾಗಿ ಮಾತನಾಡಿರುವುದಕ್ಕಾಗಿ ನನಗೆ ಸಂತೋಷವಾಗುತ್ತದೆ.

ಅಧ್ಯಕ್ಷರು.—ಅದರಿಂದ ಕಾಂಗ್ರೆಸ್ಸಿನೊಳಗೆ ಒಡಕು ಇತ್ತು ಎಂದು ತಿಳಿದುಕೊಂಡಿದ್ದೀರೋ?

(ನಗು)

ಶ್ರೀ ಬಿ. ಕೆ. ನಾಗೂರ್.—ನಾನೇನು ತಿಳಿದುಕೊಳ್ಳಬೇಕು ಸ್ವಾಮಿ? ಅದು ಎಲ್ಲರಿಗೂ ತಿಳಿದದೇ ಇದೆ. ತಾವು ಹೇಗೆ ಬೇಕಾದರೂ ತಿಳಿಯಬಹುದು. ನನ್ನ ವೈಯಕ್ತಿಕವಾದ ಅಭಿಪ್ರಾಯಗಳನ್ನು ಇಲ್ಲಿ ಕೊಡುತ್ತೇನೆ.

ಮಾನ್ಯ ಸದಸ್ಯರಾದ ಸಿದ್ಧಾಂತಿಯವರು ಎರಡು ಲಕ್ಷಕ್ಕಿಂತ ಹೆಚ್ಚಿಗೆ ಪ್ರಜಾಸಂಖ್ಯೆ ಇರತಕ್ಕ ನಗರಗಳಿಗೆ ಈ ಕಾಯಿದೆಯನ್ನು ಹಚ್ಚಬೇಕು ಎಂದು ಹೇಳಿದ್ದಾರೆ.

ಒಂದು ಲಕ್ಷಕ್ಕಿಂತ ಹೆಚ್ಚು ಪ್ರಜಾನಂಖ್ಯೆ ಇರತಕ್ಕ ನಗರಗಳಿಗೆ ಹಚ್ಚಬೇಕೆಂದು ನಾನು ಸೂಚನೆ ಮಾಡುತ್ತೇನೆ.

ರೆಂಟ್ ಕಂಟ್ರೋಲರಿಗೆ ಅಧಿಕಾರ ಕೊಡಬಾರದೆಂದು ಅವರು ಹೇಳಿದರು. ನಾನು ಅದನ್ನು ಸಪೋರ್ಟ್‌ಮಾಡುತ್ತೇನೆ. ರೆಂಟ್ ಕಂಟ್ರೋಲರು ನ್ಯಾಯಾಂಗಕ್ಕೆ ಸೇರಿದವರಾಗಿರಬೇಕು. ಇಲ್ಲದೆ ಇದ್ದರೆ ಅವರ ಮೇಲೆ ಬಿಳಿಯಜೋಪಿ ಜನರು ಒತ್ತಾಯಿತರುತ್ತಾರೆ. ಈ ಗ ಈ ರೀತಿಯಾಗಿ ಆಗುತ್ತಿರುವುದರಿಂದ ಜನರಿಗೆ ಅನಾನುಕೂಲತೆಯುಂಟಾಗಿರುವುದು ಸ್ಪಷ್ಟವಾಗಿದೆ. ಈ ಬಿಲ್ಲನ್ನು ಏನೋ ತಂದಿದ್ದಾರೆಂದು ಹೇಳುವುದಿಲ್ಲ. ರೆಂಟ್ ಕಂಟ್ರೋಲ್‌ಗೆ ಸಂಬಂಧಪಟ್ಟ ವಿಷಯಗಳಲ್ಲಿ ಕೋರ್ಟ್‌ಗಳಿಗೆ ಅಧಿಕಾರ ಕೂಡಬೇಕು. ಆ ಪ್ರಕಾರ ಸೂಕ್ತ ಬದಲಾವಣೆಗಳನ್ನು ಮಾಡಿ ಸ್ಪಷ್ಟೀಕರಣ ಮಾಡುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಸೆಲೆಕ್ಟ್ ಕಮಿಟಿಗೆ ಈಗ ಸೂಚಿಸಿರುವವರಲ್ಲಿ ಒಬ್ಬರೂ ಬಿಜಾಪುರಕ್ಕೆ ಸೇರಿದವರಿಲ್ಲ. ಇವರು ಬಿಜಾಪುರ ಜಿಲ್ಲೆಯನ್ನು ಮರೆತಂತೆ ಕಾಣುತ್ತದೆ. ನನ್ನನ್ನು ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತಿಲ್ಲ. ಬಿಜಾಪುರ ಜಿಲ್ಲೆಯೊಳಗೆ ಈ ವಿಷಯದಲ್ಲಿ ತಜ್ಞರ್ ಯಾರಿದ್ದಾರೆಯೋ, ರೆಂಟ್ ಕಂಟ್ರೋಲ್ ಬಿಲ್ ವಿಷಯದಲ್ಲಿ ಯಾರಿಗೆ ಅನುಭವವಿದೆಯೋ ಅಂಥ ಯಾವ ನದನ್ಯರನ್ನಾದರೂ ಸೆಲೆಕ್ಟ್ ಕಮಿಟಿಗೆ ಹಾಕಿದರೆ ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯವರೇ ಮುಖ್ಯ ಮಂತ್ರಿಗಳಾಗಿದ್ದಾರೆ, ಮುಖ್ಯ ಮಂತ್ರಿಗಳಾದ ಮೇಲೆ ಮೈಸೂರಿನವರೇ ಆಗಿದ್ದಾರಲ್ಲ ಎನ್ನುವ ನಂಶಯ ಬರುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ದೊಡ್ಡ ಮನಸ್ಸುಮಾಡಿ ಬಿಜಾಪುರ ಜಿಲ್ಲೆಯೊಳಗೆ ಇದರ ಬಗ್ಗೆ ಯಾರಿಗೆ ಅನುಭವವಿದೆಯೋ ಅಂಥವರನ್ನು ಸೆಲೆಕ್ಟ್ ಕಮಿಟಿಯಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳುತ್ತ ನಾನು ಹೆಚ್ಚು ಪೀಠಿಕೆಯನ್ನು ತೆಗೆದುಕೊಳ್ಳದೆ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಬಿಜಾಪುರ ಜಿಲ್ಲೆಯನ್ನು ಬಿಟ್ಟಿದ್ದಾರೆ ಅನ್ನುವಹಾಗೇನೂ ಇಲ್ಲ. ಇದೇ ರೀತಿ ಅನೇಕ ಜಿಲ್ಲೆಗಳು ಉಳಿದಿವೆ; ಆ ಜಿಲ್ಲೆಯವರೂ ಸಹ ತಮ್ಮ ಜಿಲ್ಲೆಯವರನ್ನು ಸೇರಿಸಿ ಎಂದರೆ ತೊಂದರೆಯಾಗುತ್ತದೆ.

ಶ್ರೀ ಬಿ. ಕೆ. ನಾಗರ್.—ಬಿಜಾಪುರ ಜಿಲ್ಲೆ ಹಿಂದುಳಿದ ಜಿಲ್ಲೆ, ಅದಕ್ಕೆ ರಕ್ಷಣೆ ಕೊಡುವುದ ಸರ್ಕಾರದ ಕರ್ತವ್ಯ. ಈ ದೃಷ್ಟಿಯಿಂದಾದರೂ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The House now rises and will meet on Monday at one P.M.

The House adjourned at Fifty Minutes Past Twelve of the Clock to meet again at One of the Clock on Monday, the 7th December 1959.

WD 1842 -GPB—900—14-4-1961